ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February , 2024, Pp. 1-8.
©*IIMRD*, Mysuru
IIMRD JOURNALS
www.iimrd.com

# ಜನಪದ ಸಾಹಿತ್ಯದಲ್ಲಿ ಸ್ತ್ರೀಪರ ಧೋರಣೆಗಳು

**ಡಾ.ಕೆ.ಜಿ. ಚವಾಣ**
ಪ್ರಾಚಾರ್ಯರು & ಕನ್ನಡ ಸಹ ಪ್ರಾಧ್ಯಾಪಕರು, ಎಸ್.ಜೆ.ಎಂ. ಪ್ರಥಮ ದರ್ಜೆ ಕಲಾ ಮತ್ತು ವಾಣಿಜ್ಯ ಕಾಲೇಜು, ತರೀಕೆರೆ. ಚಿಕ್ಕಮಗಳೂರು.

**ಸಾರಾಂಶ: (Abstract)**

*ಒಂದು ರಾಷ್ಟ್ರದ ಸಮಗ್ರ ಸಂಸ್ಕೃತಿಯನ್ನು ಬಯಸುವವರು ಅಗತ್ಯವಾಗಿ ಜಾನಪದ ಅಧ್ಯಯನ ಮಾಡಬೇಕು. ಪ್ರತಿಯೊಂದು ದೇಶದ ಸಂಸ್ಕೃತಿಯ ಸೌಧವು ಜಾನಪದದ ತಳಪಾಯದ ಮೇಲೆ ಸುಭದ್ರವಾಗಿ ಕಟ್ಟಲ್ಪಟ್ಟಿದೆ. ಜನತೆಯ ಜೀವನಾಡಿಯಂತಿರುವ ಜಾನಪದದ ಅಧ್ಯಯನದಿಂದಲೇ ಆಯಾ ದೇಶದ ಸಾಮಾಜಿಕ ವ್ಯವಸ್ಥೆ ಆರ್ಥಿಕ ಭದ್ರತೆ ಧಾರ್ಮಿಕ ಶ್ರದ್ಧೆ ಜನತೆಯ ಬದುಕಿನ ಮೇಲೆ ಬೆಳಕು ಚೆಲ್ಲುತ್ತವೆ. ಸಂಸ್ಕೃತಿಯ ಸಮೀಕ್ಷೆಯಲ್ಲಿ ಜಾನಪದವನ್ನು ಲಕ್ಷಿಸಿ ಸಂಸ್ಕೃತಿಯ ಸತ್ವದಿಂದ ಚೆನ್ನಾಗಿ ಬೆಳೆಯಬಲ್ಲದು ಪ್ರಾದೇಶಿಕ ಜಾನಪದದ ಸತ್ವ ಕುಂದಿದಂತೆಲ್ಲಾ ಸಂಸ್ಕೃತಿ ವಿನಾಶದತ್ತ ಹೋಗಬಹುದು ಆದ್ದರಿಂದ ಜಾನಪದ ಬೆಳೆದಂತೆ ಸಂಸ್ಕೃತಿ ಬೆಳೆಯುತ್ತದೆ ಜಾನಪದದ ಸಂರಕ್ಷಣೆ ಸಂಸ್ಕೃತಿಯ ಸಂರಕ್ಷಣೆಯಾಗಿದೆ. ಈ ಲೇಖನದಲ್ಲಿ ಜಾನಪದ ಸಾಹಿತ್ಯದಲ್ಲಿ ಕಂಡುಬರುವ ಸ್ತ್ರೀಪರ ಧೋರಣೆಗಳನ್ನು ಅಧ್ಯಯನ ಮಾಡಲಾಗಿದೆ.*

**ಮುಖ್ಯಪದಗಳು (Keywords):** ಜಾನಪದ, ಜನಪದ ಸಾಹಿತ್ಯ, ಸ್ತ್ರೀಪರ ಧೋರಣೆಗಳು, ಒಗಟು, ಲಾವಣಿ.

**ಪೀಠಿಕೆ**

ಜಾನಪದವನ್ನು ಅಧ್ಯಯನ ದೃಷ್ಟಿಯಿಂದ ಹಲವು ಭಾಗಗಳನ್ನಾಗಿ ವಿಂಗಡಿಸಬಹುದು. ಲಾವಣಿ, ಗೀತೆ, ಸ್ಥಳಕಥೆ ಐತಿಹ್ಯ ಮೊದಲಾದವುಗಳನ್ನು ಸಾಹಿತ್ಯಿಕ ಬಗೆಯೆಂದೂ ಗಾದೆ, ಒಗಟು ನುಡಿಗಟ್ಟು ಮೊದಲಾದವುಗಳನ್ನು ಭಾಷಿಕ ಬಗೆಯೆಂದೂ ನೃತ್ಯ, ಸಂಗೀತ, ಕಲೆ ಆಟಗಳನ್ನು ಕ್ರಿಯಾತ್ಮಕ ಬಗೆಯೆಂದೂ ಕರೆಯಲಾಗಿದೆ. ಜಾನಪದವು ತಾಯಿಯ ಗುಣವನ್ನು ಹೊಂದಿದ್ದು ಜೀವ ಪೋಷಕವಾಗಿದೆ. ಅದರ ಎಲ್ಲಾ ಮುಖಗಳ ಏಕಮಾತ್ರ ಗುರಿ ಮಾನವನ ಕ್ಷೇಮ ಎನ್ನುವುದು ಸರ್ವವಿಧಿತ. ಬದುಕಿನ ಎಲ್ಲಾ ಸಂದರ್ಭಗಳಲ್ಲಿಯೂ ಜಾನಪದ ಕಣ್ಣಿಟ್ಟು ಕಾಯುತ್ತದೆ. ಅದು ಜೀವ ರಕ್ಷಕ ಎನ್ನುವುದನ್ನು ಬೇರೆ ಹೇಳಬೇಕಾಗಿಲ್ಲ ಚೌತಿ ಚಂದ್ರನನ್ನು ನೋಡಲೇಬಾರದು ಯುಗಾದಿ ಚಂದ್ರದರ್ಶನ ಶುಭವನ್ನುಂಟು ಮಾಡುವುದಲ್ಲದೆ ಆಯಸ್ಸು ಆರೋಗ್ಯ ಐಶ್ವರ್ಯಗಳನ್ನು ವೃದ್ಧಿಸುತ್ತದೆ. ಹೀಗೆ ಒಂದೇ ವಸ್ತುವನ್ನು ಬೇರೆ ಬೇರೆ ಕಾಲಘಟ್ಟದಲ್ಲಿ ಜನಪದರು ಸ್ವೀಕರಿಸುವ ಮತ್ತು ತಿರಸ್ಕರಿಸುವ ರೀತಿ ಆಶ್ಚರ್ಯವೆನಿಸಿದರೂ ಅದರಲ್ಲಿ

*Please cite this article as: ಚವಾಣ ಕೆ.ಜಿ.* (2024). ಜನಪದ ಸಾಹಿತ್ಯದಲ್ಲಿ ಸ್ತ್ರೀಪರ ಧೋರಣೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ.* 1–8

ಮಾನವನ ಕಲ್ಯಾಣಕಾರಿ ಗುಣವಿದೆ ಎನ್ನುವುದನ್ನು ತಳ್ಳಿಹಾಕುವಂತಿಲ್ಲ. ಬೆಳಗಿನ ಸೂರ್ಯದರ್ಶನ ಒಳ್ಳೆಯದಾದರೆ ಮಧ್ಯಾಹ್ನದ ಬಿಸಿಲಿನ ತಿರುಗಾಟ ಒಳ್ಳೆಯದಲ್ಲ. ಬಲ ಮಗ್ಗುಲಲ್ಲಿ ಏಳುವುದು ಕೈಗಳನ್ನು ಉಜ್ಜಿ ನೋಡಿಕೊಳ್ಳುವುದು ಇಂಥ ಹತ್ತು ಹಲವಾರು ನಂಬಿಕೆ ನಿಷೇಧಗಳು ಜನಪದರಲ್ಲಿ ಇನ್ನೂ ಜೀವಂತವಾಗಿವೆ. ಆಧುನಿಕರಲ್ಲಿ ಇವು ಹೆಚ್ಚಾಗಿವೆ ಎಂದರೆ ಅತಿಶಯೋಕ್ತಿಯಾಗಲಾರದು.

ಇಂದು ಜನಪದ ಸಾಹಿತ್ಯ ಜಾಗತಿಕ ಮನ್ನಣೆ ಪಡೆದಿದೆ. ಅದು ದುಡಿಯುವ ಜನರ ಜನಪದ ಸಂಸ್ಕೃತಿಯಾಗಿದೆ. ಅವುಗಳಲ್ಲಿ ಜನಪದ ಮೌಲ್ಯಗಳು ತಾನೇ ತಾನಾಗಿ ಬಿಚ್ಚಿಕೊಳ್ಳುತ್ತವೆ. ಈ ಸಂದರ್ಭದಲ್ಲಿ ಜಗತ್ತಿನಾದ್ಯಂತ ಜನಪದ ಸಾಹಿತ್ಯವನ್ನು ವೈಚಾರಿಕ ಹಿನ್ನೆಲೆಯಲ್ಲಿ ವಿವೇಚಿಸಲಾಗುತ್ತಿದೆ. ಈ ಮೊದಲು ಭಾರತೀಯ ಪರಂಪರೆಯಲ್ಲಿ ಸಾಹಿತ್ಯ ಕಲೆಗಾಗಿ ಕಲೆ ಎನ್ನುವ ಅರ್ಥದಲ್ಲಿ ಪ್ರಕಟಗೊಂಡರೂ ಅದು ಮತಧರ್ಮದ ಪ್ರಸಾರಕ್ಕಾಗೇ ಉಳ್ಳವರ ಕಲೆಯ ಕಸುಬಾಗೆ ಬೆಳೆದುಕೊಂಡು ಬಂದಿದೆ. ಕಲೆಯ ಉದ್ದೇಶ ರಸಾನಂದವೆಂದೇ ಪ್ರತಿಪಾದಿಸುತ್ತ ಬರಲಾಗಿದೆ. ದೇಶದ ಶೇಕಡಾ ತೊಂಬತ್ತರಷ್ಟು ಜನರಿಗೆ ಸಾಹಿತ್ಯ ರಚನೆ ಅಸ್ಪೃಶ್ಯವಾಗಿತ್ತು ತದನಂತರ ಸಾಮ್ರಾಜ್ಯಶಾಹಿಗಳು ಬದಲಾದಂತೆ ಸಾಹಿತ್ಯದ ಗತಿಗಳು ಬದಲಾದರೂ ಇಂಡಿಯಾದ ಸಾಹಿತ್ಯ ತನ್ನ ಮೈ ಕೊಡವಿಕೊಂಡು ಹೊಸಚಿಗುರನ್ನು ತಳೆದದ್ದು ಬ್ರಿಟಿಷರು ತಕ್ಕಡಿ ಹಿಡಿದುಕೊಂಡು ಭಾರತಕ್ಕೆ ಬಂದ ಬಳಿಕ ಜನಪದ ಸಾಹಿತ್ಯವೆಂದರೇನು? ಎಂದು ಗೊತ್ತಿರದ ದುಡಿಯುವ ಜನ ಜನಪದ ಮೌಲ್ಯವುಳ್ಳ ಸಾಹಿತ್ಯಸೃಷ್ಟಿ ಮಾಡಿದ್ದು ಈ ನೆಲದ ವೈಶಿಷ್ಟಗಳಲ್ಲೊಂದು. ಅಲ್ಲಿ ಮಣ್ಣಿನ ವಾಸನೆ ತಾನಾಗೇ ಹರಡಿಕೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅನಕ್ಷರಸ್ಥರಾದ ಜನ ಮೊದಲಿನಿಂದಲೂ ತಮ್ಮ ಸುಖ ದುಃಖಗಳನ್ನು ಆಸೆ ಆಶೋತ್ತರಗಳನ್ನು ಹಾಡು, ಕಥೆ, ಪುರಾಣಗಳ ರೂಪದಲ್ಲಿ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ, ಇವು ಬಾಯಿ ಮಾತಿನ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಗೊಳ್ಳುತ್ತಲೇ ಬಂದಿವೆ. ಈ ಬಗೆಯ ಸಾಹಿತ್ಯವನ್ನು ಜನಪದ ಸಾಹಿತ್ಯ ಎಂದು ಕರೆಯಲಾಗಿದೆ. ಕನ್ನಡ ಜನಪದ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ ಜನಪದ ತ್ರಿಪದಿ ಮಣ್ಣಿನ ಮಕ್ಕಳ ಬೆವರ ಹನಿಯಾಗಿ ಹರಿದುಕೊಂಡು ಉಳಿದು ಬೆಳೆದುಕೊಂಡು ಬಂದಿದೆ. ಜನಪದ ಸಾಹಿತ್ಯದಲ್ಲಿ ಕೇವಲ ಮಣ್ಣಿನ ವಾಸನೆ ಎಲ್ಲ ಮಣ್ಣಿನಲ್ಲಿ ಮಿಳಿತವಾಗಿ 'ಘಂ' ಅನ್ನುವ ಜನಪದರ ಬೆವರಿನ ವಾಸನೆ ಇದೆ. ಜನಪದ ಸಾಹಿತ್ಯ ಮಣ್ಣಿನಲ್ಲೇ ಹುಟ್ಟಿ ಮಣ್ಣಿನಲ್ಲೇ ಬೆಳೆದು ಮಣ್ಣಿನಲ್ಲೇ ಸುವಾಸನೆ ಸೂಸುತ್ತಿರುವ ಅನಾಮಧೇಯ ಹಾಗೂ ಅಪರೂಪದ ಪುಷ್ಪ ಇದು ನಿಜವಾದ ಮಣ್ಣಿನ ಮಕ್ಕಳ ಸಾಹಿತ್ಯವಾಗಿದೆ. ಈ ಜನ್ಮ ತಾವು ಶಿಷ್ಟದವರಂತೆ ಸಾಹಿತ್ಯ ಸೃಷ್ಟಿ ಮಾಡಬೇಕೆಂದು ಹೊರಟವರಲ್ಲ, ಪ್ರಾಸ–ಗ್ರೀಸದ ತೊಂದರೆಗೆ ಛಂದಸ್ಸಿನ ಗೊಂದಲಕ್ಕೆ ಬಿದ್ದವರಲ್ಲ. ರಾಜಮಹಾರಾಜರಿಂದ ಮರ್ಯಾದಿಸಲ್ಪಡಬೇಕು ಪಂಡಿತರಿಂದ ಮೆಚ್ಚುಗೆ ಪಡೆಯಬೇಕು ಎಂದು ಆಶಿಸಿ ನಿಂತವರಲ್ಲ. ಅವರು ತಮ್ಮ ಬದುಕಿನ ಸುಖಃ–ದುಖಃ, ದುಗುಡ–ದುಮ್ಮಾನ, ನೋವು–ನಿರಾಸೆ, ಹುರುಪು–ಉತ್ಸಾಹಗಳನ್ನು, ಕಾಯಕ ಮಾನವೀಯತೆ ತಮ್ಮ ಎದೆಗೆ ನಾಟಿದ ರೀತಿಯನ್ನು ನಾಲಿಗೆಯ ಮೂಲಕ ಸಹಜವಾಗಿ ಹರಿಬಿಟ್ಟಿದ್ದಾರೆ. ವಿಚಿತ್ರವೆಂದರೆ ಇವರ ಈ ಸಾಹಿತ್ಯ ಶಿಷ್ಟ ಕವಿಗಳಿಗೆ ಸವಾಲಾಗಿರಬೇಕು, ಕಂಗೆಡಿಸಿರಬೇಕು; ಸ್ಪರ್ಧೆಗೆ ನಿಂತಿರುವಂತೆ ಭಾಸವಾಗಿರಬೇಕು ಜನಪದ ಸಾಹಿತ್ಯ ಶ್ರೇಷ್ಟ ಸಾಹಿತ್ಯವಾಗಿದ್ದು ತ್ರಿಪದಿ ಸಾಹಿತ್ಯವಾಗಿದೆ.

ಜನಪದವು ಒಂದು ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸಲು ತನ್ನ ಅಧ್ಯಯನದ ಮೂಲಕ ಯತ್ನಿಸುತ್ತದೆ. ಆಧುನಿಕ ತಾಂತ್ರಿಕ ಬೆಳವಣಿಗೆಯು ನಮ್ಮ ಸಾಂಸ್ಕೃತಿಕ ಬಹುತ್ವವನ್ನು ನಾಶಮಾಡಿ ಅಲ್ಲಿ ಒಂದು ಬಗೆಯ ಏಕತ್ವವನ್ನು ಪ್ರಮಾಣಭೂತ ವ್ಯವಸ್ಥೆಯನ್ನು ಹುಟ್ಟು ಹಾಕುತ್ತದೆ. ವಿಶ್ವಾದಾದ್ಯಂತ ತನ್ನ ಜಾಲವನ್ನು ಸಮೂಹ ಮಾಧ್ಯಮಗಳು ಬದುಕಿನ ವೈವಿಧ್ಯವನ್ನು ನಾಶಮಾಡಿವೆ. ನಿನ್ನೆ ಮೊನ್ನೆಯ ತನಕವೂ ನಮ್ಮ ಪ್ರದೇಶದ ಕುಮ್ಮಾರಿಕೆ, ಬಡಿಗತನ, ನೆಯ್ಗೆ, ಕೃಷಿಕರ್ಮಗಳ ವಸ್ತು ಪರಿಕರಗಳಲ್ಲಿ ಬಳಕೆಯ ವಿಧಿವಿಧಾನಗಳಲ್ಲಿ ಸಾಕಷ್ಟು ವೈವಿದ್ಯಗಳಿದ್ದವು. ಜನ ಸಮುದಾಯದ ಜೀವನವನ್ನು ರೂಪಿಸುವಲ್ಲಿ ಸಂಸ್ಕೃತಿಯನ್ನು ಕಟ್ಟುವಲ್ಲಿ ಸಂಪ್ರದಾಯಗಳು ಮಹತ್ವದವುಗಳಾಗಿವೆ. ಸಂಪ್ರದಾಯವೊಂದರ ಹಿಂದೆ ನಂಬಿಕೆ ಬಲವಾಗಿರುತ್ತದೆ. ಮೌಲ್ಯಗಳು ಬದಲಾದಂತೆಲ್ಲ ಸಂಪ್ರದಾಯ ಆಚರಣೆಗಳು ಬದಲಾಗುತ್ತವೆ. ವೈಚಾರಿಕತೆ ಬೆಳೆದಂತೆ ಅನೇಕ ಮೌಢ್ಯಮೂಲವಾದ ಸಂಪ್ರದಾಯಗಳು ವಿಸ್ಮೃತಿಗೆ ಸೇರುತ್ತವೆ. ಹಾಗೆಂದು ಗ್ರಾಮೀಣ ಜನರಲ್ಲಿ ಸಂಪ್ರದಾಯಗಳು ಗಾಢವಾಗಿರುತ್ತವೆ. ನಗರ ಪ್ರದೇಶದಲ್ಲಿ ಅವು ತೆಳುವಾಗಿರುತ್ತದೆ.

ಮಾನವನ ಮನಸ್ಸು ಅನಂತ ಶಕ್ತಿಯನ್ನು ಸುಪ್ತಮನಸ್ಸಿನ ಬಯಕೆಗಳು ಹೊರ ಜಗತ್ತಿನ್ನಲ್ಲಿ ತನ್ನ ಅಭೀಷ್ಟವನ್ನು ಈಡೇರಿಸಿಕೊಳ್ಳಲು ಉತ್ತಮ ಫಲಗಳನ್ನು ಪಡೆಯಲು ನಾನಾ ರೀತಿಯ ಪ್ರಯತ್ನಗಳಿಂದ ಅದಕ್ಕೆ ಸಾಧ್ಯವಾಗುತ್ತದೆ. ತನ್ನ ಮನಸ್ಸಿನ ಮೇಲಿನ ಇಂಥ ಪ್ರಬಲ ನಂಬಿಕೆ ನಿಸರ್ಗ ಶಕ್ತಿಯ ಮೇಲೆ ಪ್ರಭಾವ ಬೀರುವ ಪ್ರಯತ್ನಗಳಾದ ಸಂಪ್ರದಾಯ ಆಚರಣೆಗಳಿಗೆ ದಾರಿಮಾಡಿಕೊಟ್ಟಿದೆ. ತಾನು ರೋಗದಿಂದ ಗುಣಮುಖವಾಗಬೇಕು. ಒಳ್ಳೆಯ ಬೆಳೆಯನ್ನು ಪಡೆಯಬೇಕು ಒಳ್ಳೆಯ ಬೇಟೆ ಲಬ್ಯವಾಗಬೇಕು ಒಳ್ಳೆಯ ಫಲಗಳು ಬದುಕಿನಲ್ಲಿ ಲಭ್ಯವಾಗಬೇಕು ಎಂಬೆಲ್ಲ ಬಯಕೆಗಳ ಒತ್ತಡ ಒಂದು ಬಗೆಯ ಜಾನಪದ ಸೃಷ್ಟಿಗೆ ಕಾರಣವಾಗಿದೆ. ಜನಪದರ ನಂಬಿಕೆ ನಡವಳಿಕೆ ಆಲೋಚನೆಗಳು ಜಾನಪದದಲ್ಲಿರುತ್ತವೆ. ಗಾದೆ, ಒಗಟುಗಳೂ ಆಧುನಿಕ ಸಂದರ್ಭದಲ್ಲಿ ಹೊಸ ಸಂವೇದನೆಯ ಫಲವಾಗಿ ಮರುಹುಟ್ಟು ಪಡೆದು ಬಳಕೆಗೆ ಬರುತ್ತಿವೆ. ಉದಾಹರಣೆಗೆ ಗಣಿ ಪ್ರದೇಶದಲ್ಲಿ ಒಳಗೆ ಹೋದ್ರೆ ಹೆಣ ಹೊರಗೆ ಬಂದ್ರೆ ಹಣ, ಸೈನಿಕರ ವಲಯಗಳಲ್ಲಿ ಚಾಲಕನ ಹೆಂಡತಿ ಯಾವತ್ತಿದ್ದರೂ ಮುಂಡೆ, ಸೈನಿಕನ ಹೆಂಡತಿ ಯಾವೊತ್ತಿದ್ದರೂ ಮುಂಡೆ ಎಂಬಂಥ ಗಾದೆಗಳು ಚಾಲ್ತಿಯಲ್ಲಿವೆ. ಈಚೆಗೆ ಜಾನಪದವನ್ನು ಅಂತಾರಾಷ್ಟ್ರೀಯ ನೆಲೆಯಲ್ಲಿ ಹಾಗೂ ವಿವಿಧ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಇದರಿಂದಾಗಿ ಜಾನಪದ ಒಂದು ಸಾಂಸ್ಕೃತಿಕ ಸಂಕಥನದ ರೂಪದಲ್ಲಿ ಬೆಳೆಯುತ್ತಿದೆ. ಇದೀಗ ಜಾನಪದವನ್ನು ಜೆಂಡರ್ ನೆಲೆಯಲ್ಲಿ ನೋಡುವ ಹೊಸ ಪರಿಕಲ್ಪನೆಯಾಗಿ ಸ್ತ್ರೀವಾದಿ ಜಾನಪದ ಬೆಳಕಿಗೆ ಬರುತ್ತಿದೆ. ಲಿಖಿತ ಸಂದರ್ಭಕ್ಕಿಂತ ಭಿನ್ನವಾಗಿ ಜಾನಪದ ವಿಶಿಷ್ಟ ಮಹಿಳಾ ಪರಂಪರೆಯನ್ನು ಹೊಂದಿದೆ.

ಬಹುತೇಕ ಜಾನಪದ ಪ್ರಕಾರಗಳ ರಚನೆ ನಿರೂಪಕರು ಮಹಿಳೆಯರಾಗಿದ್ದು ಆಕೆಯ ಅಭಿವ್ಯಕ್ತಿ ಶಕ್ತಿಯನ್ನು ಲೋಕದೃಷ್ಟಿಯನ್ನು ದಾಖಲಿಸಿವೆ. ಆದರೆ ನಮ್ಮ ಅಧ್ಯಯನಗಳು ಹೆಣ್ಣಿನ ಈ ಮಹತ್ವದ ಕೊಡುಗೆಯನ್ನು ನಿರ್ಲಕ್ಷಿಸಿವೆ. ಈ ಬಗೆಯ ಜೆಂಡರ್ ನೆಲೆಯ ಅಧ್ಯಯನ ಸ್ತ್ರೀವಾದಿ ಜಾನಪದದ ಆಸಕ್ತಿಯಾಗಿದೆ ಸ್ತ್ರೀವಾದಿ ಜಾನಪದ ಅಂದರೆ ಮಹಿಳಾ ಜಾನಪದ ಜೆಂಡರ್ ನೆಲೆಯಿಂದ ಅಧ್ಯಯನ ಮಾಡುವುದಾಗಿದೆ. ಯಾವುದೇ ಒಂದು ಜನಸಮುದಾಯದಲ್ಲಿ ಹೆಣ್ಣು–ಗಂಡು ಇರುವುದು ಮತ್ತು ಸಂಸ್ಕೃತಿಯ ರಚನೆಯಲ್ಲಿ ಅವರ ಪಾಲ್ಗೋಳ್ಳುವಿಕೆ ಸಹಜವಾದುದು. ಆದರೆ ನಮ್ಮ ಎಲ್ಲ ಅಧ್ಯಯನಗಳಂತೆ

ಜಾನಪದ ಅಧ್ಯಯನಗಳು ಕೂಡಾ ಸಂಸ್ಕೃತಿಯ ಪಾಲುದಾರಳಾದ ಹೆಣ್ಣನ್ನು ಗುರುತಿಸಿಲ್ಲ ಮತ್ತು ಗುರುತಿಸಿದ ಸಂದರ್ಭದಲ್ಲೂ ಅದು ನಿಜವಾದ ಹೆಣ್ಣಿನ ದನಿಯಾಗಿರಲಿಲ್ಲ, ಕಾರಣ ಈ ಎಲ್ಲ ಅಧ್ಯಯನಕಾರರು ಪುರುಷರಾಗಿದ್ದು ಮಾಹಿತಿದಾರರು ಮತ್ತು ಸಂಗ್ರಾಹಕರು ಕೂಡಾ ಪುರುಷರೇ ಆಗಿದ್ದಾರೆ. ಇಂತಹ ಮಾಹಿತಿಗಳಿಂದ ಆಧರಿತವಾದ ವಿಶ್ಲೇಷಣೆಯಲ್ಲಿ ಪುರುಷರ ದೃಷ್ಟಿ ಹಾಗೂ ದನಿಯಷ್ಟೇ ದಾಖಲಾಗಿದೆ. ಮಹಿಳೆಯರ ಚಟುವಟಿಕೆ ಅನುಭವ ಅವಲೋಕನಗಳನ್ನು ಅಗೋಚರಗೊಳಿಸಲಾಗಿದೆ. ಇಡಿಯ ಅಧ್ಯಯನ ಇತಿಹಾಸ ಹೆಣ್ಣಿನ ಬಗೆಗೆ ಮೌನ ತಾಳುತ್ತದೆ ಹೆಣ್ಣಿನ ಈ ಮೂಕತೆಯ ಹಿಂದಿನ ಶಕ್ತಿರಾಜಕೀಯದ ಶೋಧ ಸ್ತ್ರೀವಾದದ ಕಾಳಜಿಯಾಗಿದೆ. ಈ ಶೋಧದಿಂದ ಹೆಣ್ಣಿನ ವಾಸ್ತವ ಅನುಭವಗಳನ್ನು ಹಾಗೂ ಇತ್ಯಾತ್ಮಕ ಪರಿಕಲ್ಪನೆಗಳನ್ನು ಕಟ್ಟುವುದು ಸಾಧ್ಯವಾಗುತ್ತದೆ ಇದು ಗಂಡಿನ ಕಣ್ಣಿನಿಂದ ಸೃಷ್ಟಿಯಾದ ಹೆಣ್ಣು ಮಾದರಿಗೆ ಭಿನ್ನವಾಗಿ ಸ್ತ್ರೀಯರಿಗೊಂದು ಅಸ್ತಿತ್ವ ಪರಂಪರೆಯ ಇತಿಹಾಸವನ್ನು ದಾಖಲಿಸುವ ಜವಬ್ದಾರಿಯೂ ಆಗಿದೆ. ಇದಕ್ಕೆ ಈಗಿರುವ ಅಧ್ಯಯನ ಮಾದರಿಗೆ ಹೆಣ್ಣನ್ನು ಸೇರಿಸುವುದರಿಂದ ಸಾಧ್ಯವಾಗುವುದಿಲ್ಲ. ಈ ಮಾದರಿಯ ಪರಿಕಲ್ಪನಾತ್ಮಕ ಚೌಕಟ್ಟನ್ನು ಪುನರ್ ರಚಿಸಬೇಕಾಗಿದ್ದು ಸ್ತ್ರೀಕೇಂದ್ರಿತಗೊಳಿಸಬೇಕಾಗಿದೆ. ಸ್ತ್ರೀವಾದಿ ಪರಿಕಲ್ಪನೆ ಹೆಣ್ಣನ್ನು ಗಂಡಿನ ಪ್ರತಿಸ್ಪರ್ಧಿಯಾಗಿಟ್ಟು ನೋಡಬಯಸುವುದಿಲ್ಲ ಹೆಣ್ಣಿಗೂ ಒಂದು ನಿಡುಗಾಲದ ಪರಂಪರೆಯಿಂದ ಈ ಬದುಕಿನ್ನಲ್ಲಿ ಅವಳು ಕಂಡದ್ದೇನು, ಕಟ್ಟಿದ್ದೇನು ಆಡಿದ್ದೇನು, ಹಾಡಿದ್ದೇನು ಅವಳ ಬದುಕನ್ನು ಪ್ರಭಾವಿಸಿದ ಅಂಶಗಳೇನು ಅಲ್ಲಿನ ಅವಳ ಲೋಕಗ್ರಹಿಕೆಯೇನು ಇತ್ಯಾದಿ ಪ್ರಶ್ನೆಗಳ ಹುಡುಕಾಟದಲ್ಲಿ ಸ್ತ್ರೀವಾದ ಆಸಕ್ತವಾಗಿದೆ. ತಳ್ಳಲಾದ ಅದೃಶ್ಯಗೊಳಿಸಲಾದ ಹೆಣ್ಣು ಜಗತ್ತು ತೆರೆದುಕೊಳ್ಳುವುದರಿಂದ ಸಂಸ್ಕೃತಿಗೆ ಹೊಸ ಆಯಾಮ ಸಾಧ್ಯವಾಗುತ್ತದೆ. ಇಂತಹ ಯೋಚನೆಯನ್ನು ಮುಂದಿಟ್ಟುಕೊಂಡು ಸ್ತ್ರೀವಾದ ತನ್ನ ತಾತ್ವಿಕತೆಯನ್ನು ರೂಪಿಸಿಕೊಂಡಿದೆ. ಜಾನಪದವನ್ನು ಸಾಂಸ್ಕೃತಿಕ ಸಂಕಥನವಾಗಿ ಅರಿಯಲು ಮತ್ತು ವಿವರಿಸಲು ಸ್ತ್ರೀವಾದಿ ತಿಳುವಳಿಕೆಗಳು ಸಹಾಯಕವಾಗಬಲ್ಲವು. ಸಂಸ್ಕೃತಿಯ ಮಹಿಳಾ ಮುಖದ ಶೋಧದಲ್ಲಿ ಜಾನಪದ ಜಗತ್ತಿನೊಳಗಡೆಯ ಸ್ತ್ರೀಶಕ್ತಿಯ ಮಾದರಿಗಳನ್ನು ಹೇಗೆ ಬಳಸಿಕೊಳ್ಳಬಹುದು ಎನ್ನುವುದರತ್ತ ಸ್ತ್ರೀವಾದ ಆಸಕ್ತವಾಗಿದೆ. ಭಾರತದಂತಹ ಬಹುಸಂಖ್ಯೆಯ ಅನಕ್ಷರಸ್ಥ ಸಂದರ್ಭದಲ್ಲಿ ಸ್ತ್ರೀವಾದವನ್ನು ಮೌಖಿಕ ಪರಂಪರೆಯ ಜಾನಪದ ಅಂತರ್ ಸಂಬಂಧ ಹೊಂದಿದ ಜ್ಞಾನ ಶಾಖೆಗಳಾಗಿದ್ದು ಸ್ತ್ರೀವಾದಿ ಜಾನಪದ ಅಂತಹ ಅಧ್ಯಯನ ವಿಧಾನವಾಗಿದೆ.

‘ತ್ರಿಪದಿ ಹೆಣ್ಣು ಮಕ್ಕಳ ಹೃದಯದ ಪಡಿಗನ್ನಡಿ’ ಎಂದೇ ಪ್ರಸಿದ್ದಿಯಾಗಿದೆ. ಇದರಲ್ಲಿ ಗಂಡಸರ ತ್ರಿಪದಿಗಳೂ ಇವೆ. ಇಂಥ ತ್ರಿಪದಿ ಸಾಹಿತ್ಯದಲ್ಲಿ ಹೆಣ್ಣಿನ ಮೌಲ್ಯಗಳು ಬಿತ್ತರಗೊಂಡ ಬಗೆ ವೈಚಾರಿಕತೆಗೆ ಹಿಡಿದ ಕನ್ನಡಿಯಾಗಿದೆ. ಈ ನೆಲದ ಮೂಲ ಸಂಸ್ಕೃತಿಯಾಗಿ ಹರಿದದ್ದು ದ್ರಾವಿಡ ಸಂಸ್ಕೃತಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಹೆಣ್ಣಿಗೆ ಹೆಚ್ಚಿನ ಸ್ಥಾನಮಾನಗಳು ಲಭ್ಯವಿದ್ದವು ಎಂಬುದು ಮಾತೃದೇವತೆಯ ಕಲ್ಪನೆ ಮತ್ತು ಅನೇಕ ಆಧಾರಗಳು ನಮಗಿಂದು ಸಿಗುತ್ತವೆ. ಆದರೆ ಕಾಲಾನಂತರ ಆರ್ಯರ ದಾಳಿಯನಂತರ ಅವರ ಸಂಸ್ಕೃತಿಯ ದಟ್ಟಡವಿಯಲ್ಲಿ ಹೆಣ್ಣು ಅಸ್ಪೃಶ್ಯಳಾದಳೆಂಬುದು ಇತಿಹಾಸದಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ. “ಸ್ತ್ರೀಯರು ತತ್ವಶಾಸ್ತ್ರವನ್ನು ಎಂದೂ ಅಭ್ಯಸಿಸಬಾರದು, ವೈವಾಹಿಕ ನಿಯಮಗಳನ್ನು ಪಾಲಿಸುವುದೇ ಅವರಿಗೆ ಹೆಚ್ಚಿನ ತತ್ವ” – (ಯುರೋಪಿನ ಧರ್ಮಬೋಧಕ) ‘ಜ್ಞಾನವು ಪುರುಷನ ಗೌರವವನ್ನು ಹೆಚ್ಚಿಸಿದರೆ ಅಜ್ಞಾನವು ಸ್ತ್ರೀಯರ ಸೌಂದರ್ಯವನ್ನು ಹೆಚ್ಚಿಸುವುದು’ – (ಚೀನಿಗಾದೆ),

‘ಸ್ತ್ರೀಯು ಪುರುಷನಿಗೆ ಏನನ್ನೂ ಕಲಿಸಲಾರಳು, ಜಗತ್ತಿನ್ನಲ್ಲಿ ಪಾಪವನ್ನು ತಂದವಳೇ ಹೆಣ್ಣು ಆದ್ದರಿಂದ ಸ್ತ್ರೀಯರು ಕಠೋರ ನರಕಕ್ಕೆ ಹೋಗುತ್ತಾರೆ. ಅವರ ಮುಕ್ತಿಗೆ ಉಪಾಯವೇ ಇಲ್ಲ. – (ಸೇಂಟ್ ಪಾಲ್) ನ:ಸ್ತ್ರಿ ಸ್ವಾತಂತ್ರ್ಯ ಮರ್ಹತಿ – (ಮನು) ಹಿಂದೂ ಧರ್ಮದಲ್ಲಿ ಶೂದ್ರ ಕೀಳು ಮಾನವನಾದರೆ ಸ್ತ್ರೀ ನೀಚಳಾಗಿದ್ದಾಳೆ. ಇದರಿಂದಾಗಿ ಸ್ತ್ರೀ ಹಿಂದೂ ಸಮಾಜದಲ್ಲಿ ಶೂದ್ರರಿಗಿಂತ ಹೆಚ್ಚಿನ ತುಚ್ಚೀಕರಣಕ್ಕೆ ಗುರಿಯಾಗಿದ್ದಾಳೆ. ‘ಸ್ತ್ರೀ ಕಿರುಬನ ಹೃದಯದವಳು’–(ಋಗ್ವೇದ) ‘ಅವಳು ಎಲ್ಲ ಕೆಡುಕಿನ ಬೇರು’ – (ಮಹಾಭಾರತ) ‘ಅವಳು ಚೆಂಚಲೆ, ಖಡ್ಗದಂತೆ ಹರಿತವಾದವಳು, ಬಿರುಗಾಳಿಯಂತೆ ಅಸ್ಥಿರಳು – (ರಾಮಾಯಣ) ಸ್ತ್ರೀ ಒಂದು ವಸ್ತು ಪದಾರ್ಥ – (ಶಾಕ್ತ) ಸ್ತ್ರೀ ಎಂದರೆ ಭಾರತೀಯ ಸಂಸ್ಕೃತಿಯ ಪರಿಕಲ್ಪನೆಯಂತೆ ಹೇರುವವಳು ‘ಸೂತ್ರಿ’ ‘ಸೋತೃ’ ಎಂಬ ಧಾತುವಿನ ಅರ್ಥದಂತೆ ಹೇರುವ ಪ್ರಾಣಿ. ಆದ್ದರಿಂದ ಹೆಣ್ಣು ಪ್ರಾಣಿಗಳಿಗೂ ‘ಸ್ತ್ರೀ’ ಎಂದು ಹೆಸರು ಗರ್ಭದ ಅಸ್ತಿತ್ವದಿಂದಲೇ ವ್ಯಕ್ತಿತ್ವವನ್ನು ಪಡೆದು ಕೊಳ್ಳುವಳು. ಮಹಿಳೆ ಎನ್ನುವಲ್ಲಿಯೂ ಕೂಡ ‘ಮಹಾ+ಇಳೆ’ ಎಂಬ ಸಮಾಸ ಪದವಿದ್ದು ಭೂಮಿಯಂತೆ ಸಹನಶೀಲವುಳ್ಳವಳು ಎಂದು ಕರೆಯಲಾಗಿದೆ. ಅಂದರೆ ಪುರುಷ ಬೆಟ್ಟದಷ್ಟು ಕಷ್ಟ ಕೊಟ್ಟರೂ ಕೊಲ್ಲುವಷ್ಟು ಕ್ರೂರಿಯಾದರೂ ತಾಳಬೇಕೆಂಬ ಮನೋಭಾವದ ಹಿನ್ನೆಲೆಯಲ್ಲಿ ಹೆಣ್ಣು ಮಹಾ+ಇಳೆ ಆಗಿದ್ದಾಳೆಂಬುದನ್ನು ನೆನಪಿಡಬೇಕಾಗುತ್ತದೆ. ಹೀಗೆ ಕಾಲಾನುಕಾಲದಿಂದ ಅಸ್ಪೃಶ್ಯಳಾಗಿ ಮಹಾಸತಿ (ಮಾಸ್ತಿ)ಯಾಗಿ ಭೋಗದ ವಸ್ತುವಾಗಿ ಒಡವೆಯಾಗಿ ಗಂಡಿನ ಕಣ್ಣಿಗೆ ಹಬ್ಬ ಮಾಡುವ ನಾಟ್ಯರಾಣಿಯಾಗಿ ಬಸವಿಯಾಗಿ, ದೇವದಾಸಿಯಾಗಿ ಸಾಲದೆಂಬಂತೆ ಸೂಳೆಯಾಗಿ ಶೋಷಣೆಗೊಳಗಾಗಿದ್ದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಈ ವ್ಯವಸ್ಥೆಯ ಹಿಂದಿನ ಶಕ್ತಿಗಳಾವುವು ಎಂಬುದನ್ನು ಸರಳವಾಗಿ ಹೇಳುವಂತಿಲ್ಲ.

ಪ್ರಾದೇಶಿಕ ಜನಪದ ಕನ್ನಡದಲ್ಲಿ ಮಹಿಳೆ ಶಿಷ್ಟಸಾಹಿತ್ಯಕ್ಕಿಂತ ಜನಪದ ಸಾಹಿತ್ಯದಲ್ಲಿ ಕ್ರಿಯಾಶೀಲಳಾಗಿ ಕಾಣುತ್ತಾಳೆ ಅಲ್ಲದೆ ಪ್ರಗತಿಪರ ಆಲೋಚನೆಗಳ ಅನೇಕ ಸೆಳವುಗಳನ್ನು ಹರಿಯಬಿಟ್ಟಿದ್ದಾಳೆ. ಶಿಷ್ಟ ಸಾಹಿತ್ಯದ ಪರಂಪರೆ ಪುರುಷರಿಂದ ನಿರ್ಮಿತವಾದದ್ದು ಕಂಡು ಬಂದರೆ ಜನಪದ ಸಾಹಿತ್ಯ ಗಂಡು–ಹೆಣ್ಣುಗಳಿಬ್ಬರ ಅಥವಾ ಹೆಚ್ಚಾಗಿ ಹೆಣ್ಣಿನಿಂದಲೇ ಪ್ರಾರಂಭವಾಗಿದೆ. ಒನಕೆವಾಡು, ಓವಿಹಾಡು ಮುಂತಾದವು ಕವಿರಾಜಮಾರ್ಗಕಾರನ್ನಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಅವೆಲ್ಲ ಹೆಂಗಸರ ಹಾಡುಗಳಾಗಿವೆ. ಆಯಾ ಸಮಾಜ ಆಯಾ ಕಾಲಕ್ಕೆ ನಂಬಿಕೊಂಡ ಜೀವನಾದರ್ಶ, ನೈತಿಕ ನಂಬಿಕೆಯೇ ಮೌಲ್ಯ ಅದು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಉದಾಹರಣೆಗೆ ಮಹಾಸತಿ (ಮಾಸ್ತಿ)ಯಾಗುವುದು ಒಂದು ಕಾಲಕ್ಕೆ ಮೌಲ್ಯವಾಗಿತ್ತು ಅದು ಇಂದು ಅಪಮೌಲ್ಯವಾಗಿದೆ. ಹಾಗೇ ಅದು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಭಾರತೀಯ ಸ್ತ್ರೀಗೆ ಪಾತಿವೃತ್ಯ ಒಂದು ಮೌಲ್ಯವೆನಿಸಿದರೆ ಅದೇ ಒಬ್ಬ ವಿದೇಶಿ ಸ್ತ್ರೀಗೆ ಅದು ಮೌಲ್ಯವೆನಿಸಲಾರದು. ಸಮಾಜದಲ್ಲಿ ವರ್ಗ ವರ್ಗಗಳ ನಡುವೆ ಮೌಲ್ಯಗಳ ಪರಿಕಲ್ಪನೆ ಭಿನ್ನವಾಗಿ ಕಾಣುತ್ತದೆ. ಬ್ರಾಹ್ಮಣ ಸ್ತ್ರೀ ವಿಧವೆಯಾದರೆ ತಲೆ ಬೋಳಿಸಿ ಜೀವನ ಪರ್ಯಂತ ಮರು ಮದುವೆಯಾಗದೆ ಹಾಗೆ ಇದ್ದರೆ, ಕೆಳವರ್ಗದಲ್ಲಿ ವಿಧವೆ ಉಡಿಕೆ (ಕೂಡಿಕೆ) ಪದ್ದತಿಯಲ್ಲಿ ಮರುಮದುವೆಯಾಗುತ್ತಾಳೆ. ಮೇಲ್ವರ್ಗದವರಿಗೆ ಪ್ರಾಣಿಬಲಿ, ಮಾಂಸ ಭಕ್ಷಣೆ ಅಪಮೌಲ್ಯವೆನಿಸಿದರೆ, ಕೆಳವರ್ಗದವರಿಗೆ ಅದು ಉನ್ನತ ಮೌಲ್ಯವಾಗಿ ಕಾಣುತ್ತದೆ. ಹೀಗೆ ಮೌಲ್ಯ ಕಲ್ಪನೆ ನವಿಲಿನ ಗರಿ ಬಿಚ್ಚಿಕೊಳ್ಳುವಂತೆ ಯುವ ಬದುಕಿನ ಪ್ರಕ್ರಿಯೆಯೇ ಮೌಲ್ಯ ಎನ್ನುವ ತೀರ್ಮಾನಕ್ಕೆ ಬರುತ್ತದೆ. ಶಿಷ್ಯಸಾಹಿತ್ಯ ವರ್ಗ, ವರ್ಣ, ಜಂಜಡದ ನಡುವೆ ಶೀಲ–ಅಶ್ಲೀಲ ಕಲ್ಪನೆಗಳ ನಡುವೆ ಹುಟ್ಟಿದರೆ ಜನಪದ

ಸಾಹಿತ್ಯ ಇದ್ಯಾವುದನ್ನೂ ಲೆಕ್ಕಿಸಿಲ್ಲ. ಅಲ್ಲಿ ಹೆಣ್ಣು ಪಾಲ್ಗೊಂಡದ್ದು ಕಡಿಮೆ ಮತ್ತು ಹೆಣ್ಣಿನ ಪಾತ್ರ ಗುಣಗಳ ಚಿತ್ರಣ ಪುರುಷ ದೃಷ್ಟಿಯ ಪುರೋಹಿತಶಾಹಿಯ ಹಿನ್ನೆಲೆಯಲ್ಲಿ ಚಿತ್ರಿತಗೊಂಡಿದೆ. ಆದರೆ ಜನಪದ ಸಾಹಿತ್ಯದ ಪ್ರತಿಯೊಂದು ಪ್ರಕಾರದ ನಡುವೆ ಮಹಿಳೆ ಕಾಣಿಸಿಕೊಂಡಿದ್ದಾಳೆ. ಮಹಿಳೆಗೆ ದುಡಿಯುವ ಹಕ್ಕು ಮತ್ತು ಆರ್ಥಿಕ ಸ್ವಾತಂತ್ರ್ಯ ಎಲ್ಲೆಲ್ಲಿ ಲಭ್ಯವಿದೆಯೋ ಅಲ್ಲಲ್ಲಿ ಮಹಿಳೆ ನಿರ್ಬಿಡೆಯಾಗಿ ಸ್ವತಂತ್ರಳಾಗಿದ್ದಾಳೆ. ಪುರುಷನ ಕಪಟತನವನ್ನು ಪ್ರಶ್ನಿಸಿದ್ದಾಳೆ. ಹೆಣ್ಣು ತಾನು ತಳೆದ ನಿಲುವನ್ನು ಮುಟ್ಟಲು ಪಡೆಯಲು ಮತ್ತು ದಿಟ್ಟವಾಗಿ ನಡೆದು ತೋರಿಸಲು ಅನುಸರಿಸಿದ ನಂಬುಗೆಯೇ ತನಗೆ ಸರಿಯೆಂದು ತೋರಿದ ಆದರ್ಶವೇ ಇಲ್ಲಿ ಆಕೆಯ ಮೌಲ್ಯವೆನಿಸುತ್ತದೆ.

ದೇವರ ಕುರಿತು ನಮ್ಮ ವೈಚಾರಿಕ ನಿಲುವು ಏನೇ ಇರಲಿ ಜನಪದರು ದೇವರನ್ನು ನಂಬಿದವರು ಆ ದೇವರು ಅಮೂರ್ತವೆಂದಾಗಲಿ ಸರ್ವಶಕ್ತನೆಂದಾಗಲಿ ಇರುವುನೆಂದು ನಂಬಿ ತನ್ನ ಸುತ್ತ ಮುತ್ತಲಿನ ಪರಿಸರದ ಬಡಜೀವಿಗಳಲ್ಲಿ ಮತ್ತು ಜನಗಳಲ್ಲೇ ಇದ್ದಾನೆಂದು ನಂಬಿದವರು. ಕಾಣದ ದೇವರಿಗೆ ಅಲ್ಲಿ ಅವಕಾಶವಿಲ್ಲ. ಗರತಿ ಅದನ್ನು ಸ್ಪಷ್ಟಪಡಿಸುತ್ತಾಳೆ.

***ಕಾಸೀಗಿ ಹೋಗಲಾಕ ಏಸೊಂದು ದಿನಬೇಕ***

***ತಾಸ್ಹೊತ್ತಿನ್ಹಾದಿ ತವರೂರ: ಮನಿಯಾಗ I***

***ಕಾಸಿ ಕುಂತಾಳ ಹಡೆದವ್ವ II***

ಹೀಗೆನ್ನುವಲ್ಲಿ ಆಕೆಯ ದೇವತಾ ಪ್ರಜ್ಞೆ ಎಂಥವರನ್ನೂ ದಂಗು ಬಡಿಸುತ್ತದೆ, ಕಾಸಿಗೆ ಹೋಗಬೇಕಾದರೆ ಬರಿಗಾಲಲ್ಲಿ ನಡೆಯಬೇಕು, ಉಪವಾಸವಿರಬೇಕು ಏಸೊಂದು ದಿನಬೇಕು ಎನ್ನುವಲ್ಲಿ ದಿನಗಳೂ ಲೆಕ್ಕವಿಲ್ಲ ಹೋದ ಭಕ್ತರು ತಿರುಗಿ ಮನೆ ಸೇರುತ್ತಾರೆನ್ನುವ ಭರವಸೆಯಿಲ್ಲ. ಆದರೂ ಅಲ್ಲಿ ದೇವರಿಲ್ಲ ಆಕೆಯ ನಿಜವಾದ ದೇವರು ತಾಸ್ಹೊತ್ತು ನಡೆದರೆ ಸಿಗುವ ತವರು ಮನೆಯಲ್ಲಿ ಕುಳಿತಿರುವ ತಾಯಿಯನ್ನು ಬಿಟ್ಟು ದೇವರಿಲ್ಲ. ಅದಕ್ಕಾಗಿಯೇ ಪುಣ್ಯಕ್ಷೇತ್ರ ತೀರ್ಥಯಾತ್ರೆ ತಿರಸ್ಕರಿಸುತ್ತಾಳೆ. ನೆರೆಹೊರೆ ಹಾಗೂ ಗೆಳೆತನದ ಮಹತ್ವವನ್ನು ಆಸ್ತಿ ಅಂತಸ್ತು ಅಧಿಕಾರಗಳಿಗಿಂತ ಹಿರಿದಾದುದು ಮಾನವೀಯತೆ, ಪ್ರೀತಿ ವಿಶ್ವಾಸ ಮತ್ತು ಸಹಬಾಳ್ವೆಯ ಬದುಕು ಇವನ್ನು ಗಳಿಸದೇ ಹೊಂದಿಕೊಂಡು ಬಾಳದೆ ಹೋದರೆ ಅದು ಬದುಕೇ ಅಲ್ಲ ಅವಗುಣದ ಬದುಕನ್ನು ಗರತಿ ತಿರಸ್ಕರಿಸುತ್ತಾಳೆ. ಜೀವನದಲ್ಲಿ ಅತಿ ಮಹತ್ವದ ಸಂಪಾದನೆ ಎಂದರೆ ಗೆಳೆತನ ಅದನ್ನು ನಂಬಿ ನಡೆದುಕೊಂಡ ಬಗೆ ಅನುಕರಣನೀಯ.

***ಮನಿಯ ಮುಂದಿನ ಗೆಳತಿ ದನಿಯ ಕೂಡಿಸಬಾರ***

***ದನಿಶುದ್ಧ ನಿನ್ನ ಗುಣ ಶುದ್ಧ: ಗೆಳೆತವ್ವ I***

***ಗುಣಕ ಕಟ್ಟೇನಿ ಗೆಳೆತನ II***

ಇಲ್ಲಿ ಹಣ ಅಂತಸ್ತು ಅಧಿಕಾರದ ಪ್ರಶ್ನೆಯೇ ಬರುವುದಿಲ್ಲ ಗುಣವೇ ಮುಖ್ಯ ಅಂಥ ಗೆಳತಿ ಬಡವಿಯಾದರೂ ಸರಿಯೇ ಕಸ್ತೂರೆಂತ ಗೆಳತಿ ಕಸದಾಗ ನಿಂತಾಳ, ಕಸವಿಸಿ ನನ್ನ ಮನದಾಗ ನನ ಗೆಳತಿ ಕಸ್ತೂರಿ ಬಾರ ಬಳಿಯಾಕ– ಎಂದು ಸ್ವಾಗತಿಸುತ್ತಾಳೆ. ಬಡತನ ಸಿರಿತನದ ಕುರಿತು "ಬಡವಿಯಾಡಿದ ಮಾತು ನುಡಿನುಡಿಗೆ ಬ್ಯಾಸರ ವಡವಿ ಇಟ್ಟವ್ವ ಬನವನದು : ಹೇಳಿದರ ನುಡಿ ನುಡಿಗೆ ಬಾಯ ಬಿಡತಾರ"–

ಇದೇ ಮಾತನ್ನು ಬಸವಣ್ಣ ಕೂಡ ಸಿರಿಗರ ಹೊಡೆದವರ ನುಡಿಸಲು ಬಾರದು ಎನ್ನುತ್ತಾನೆ. "ಬಡವನ ಹೆಂಡತಿ ಬಸುರಿಯಾಗಬಾರದು" ಎನ್ನುವ ಗಾದೆಯಂತೆ ಅಂದರೆ ಬಡವನ ಹೆಂಡತಿಯು ಬೇರೆಯವನ ಜೊತೆಗೆ ಬಸುರಿಯಾಗಿದ್ದಾಳೆ ಎನ್ನುತ್ತಾರೆ. ಅದೇ ಶ್ರೀಮಂತನ ಹೆಂಡತಿ ಹಾದರ ಮಾಡಿದರೂ 'ಹೊನ್ನು ಇದ್ದರೆ ತೊನ್ನೂ ಮುಚ್ಚಿತಂತೆ ಎನ್ನುವಂತೆ ಆಕೆ ಪತಿವೃತೆಯೇ ಆಗುತ್ತಾಳೆ. ಹೀಗೆ ಸಿರಿತನ – ಬಡತನ ಸಮಾಜದಲ್ಲಿ ಒಂದು ಏರು–ಪೇರನ್ನು ಉಂಟುಮಾಡಿದೆ. ಉಳ್ಳವರೇ ದರ್ಬಾರು ನಡೆಸುವಾಗ ಬಡವರ ಬೆವರಹನಿ ಅವರ ಪಾದ ಕೆಳಗೆ ಹರಿಯುತ್ತಿರುತ್ತದೆ. ಕಾಯಕವನ್ನು ಕುರಿತು 'ಕೈ ಕೆಸರಾದರೆ ಬಾಯಿ ಮೊಸರು'– ಎನ್ನುವ ಈ ಗಾದೆ ಜನಪದರ ದುಡಿಮೆಯನ್ನು ಸೂಚಿಸುತ್ತದೆ. "ಕಸವ ಹೊಡೆದ ಕೈಯು ಕಸ್ತೂರಿ ನಾತಾವ ಬಸವಣ್ಣ ನಿನ್ನ ಸೆಗಣೀಯ ಬಳೆದ ಕೈ ಎಸಳ ಯಾಲಕ್ಕಿ ಗೊನಿನಾತ" ದುಡಿಯುವವರಿಗೆ ಕೆಸರೇನು, ಮುಸಿರೇನು, ಬೆವರು ಹೊಲಸಲ್ಲ ಆ ಮುತ್ತು ನೆಲದಲ್ಲಿ ಉದುರಿದಾಗಲೇ ಮುತ್ತಿನಂಥ ಕಾಳು ಬೆಳೆಯುವುದು. ಕೌಟುಂಬಿಕ ಆವರಣದಲ್ಲಿ ತವರುಮನೆ ನೆನೆದು ಅಕ್ಕ–ತಂಗೆರ ಹೊರತು ಮತ್ತೊಬ್ಬ ಗೆಳತಿಲ್ಲ ಮಕ್ಕಳ ಹೊರತು ಬಳಗಿಲ್ಲ ನನ ತಾಯಿ ಕಾಶಿ ನಿನ ಹೊರತು ತವರಿಲ್ಲ ಎನ್ನುತ್ತಾಳೆ. 'ಮನೆಯ ಮೊದಲ ಪಾಠಶಾಲೆ ಜನನಿ ತಾಯಿ ಮೊದಲಗುರು' ತಾಯಿ ತನ್ನ ನೋವು ನಿರಾಸೆಗಳನ್ನೆಲ್ಲ ಬತ್ತಿಯ ಮಾಡಿ ತನ್ನಾಸೆಯ ಎಣ್ಣೆಯ ನೆರೆದು ಮಕ್ಕಳನ್ನು ಸಾಕಿ ಸಲುಹಿ ಬೆಳಸಿ ಬೆಳಗಿಸುತ್ತಾಳೆ. ತಾಯಿ–ತಂದೆಯೇ ಹೆಣ್ಣು ಮಕ್ಕಳ ಆಸ್ತಿ ಅವರು ಇರುವವರೆಗೂ ತವರಿನ ಸಂಬಂಧ ಗಾಢವಾಗಿರುತ್ತದೆ. "ಉಂಗುರ ಉಡದಾರ ಮುರದರ  ಮಾಡಿಸಬಹುದು ಮಡದಿ ಸತ್ತರ ತರಬಹುದು : ಹಡೆದಂತ ತಂದೆ–ತಾಯೆಲ್ಲಿ ಸಿಕ್ಕಾರ" ಈ ಒಂದು ತ್ರಿಪದಿಯಲ್ಲಿ ತಂದೆ–ತಾಯಿ ಮಹತ್ವ ಕುರಿತು ತಿಳಿಸುತ್ತದೆ. ವೈಯಕ್ತಿಕ ಆವರಣದಲ್ಲಿ ಪ್ರಣಯ ಕುರಿತು "ಕೂಲಿ ಮಾಡಿದದೇನ ಕೋರಿ ಹೊತ್ತರೇನ ನಮಗ ನಮರಾಯ ಬಡವೇನ : ಬಂಗಾರ ಮಾಲು ಇದ್ದಾಂಗ ಮನಿಯಾಗ"– ಮನ್ಮಥನಂತ ಗಂಡ ಸರಸವಾಡುತ್ತ ದಿನ ಕಳೆಯುತ್ತಿದ್ದರೆ ಆಸ್ತಿ–ಅಂತಸ್ತನ್ನೇನು ಸುಡಬೇಕು ಎಂದು ಸಂತೃಪ್ತಿಯ ಜೀವನ ನಡೆಸುತ್ತಾಳೆ ಹೊಂದಿಕೊಂಡು ಬಾಳುತ್ತಾಳೆ. ಗಂಡ–ಹೆಂಡಿರಲ್ಲಿ ಜಗಳ ಬಂದರೂ ಗಂಧ ತೀಡಿದಂತೆ ಎಂದು ಬಗೆಯುತ್ತಾಳೆ. "ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ" ಎಲ್ಲಿ ಸ್ತ್ರೀಯರು ಪುರುಷರ ದಬ್ಬಾಳಿಕೆಯಿಂದ ಕೊರಗದೆ ಮರುಗದೆ ಸಿಟ್ಟಾಗದೆ ನಗುತ್ತ ರಮಿಸಲ್ಪಡುತ್ತಾರೋ ಗೌರವಿಸಲ್ಪಡುತ್ತಾರೋ ಪೂಜಿಸಲ್ಪಡುತ್ತಾರೋ ಅಲ್ಲಿ ದೇವರುಗಳು ನೆಲೆಸಿರುತ್ತವೆ. ಎಂದು ಹೇಳಿ ಕಾಲಾನುಕಾಲದಿಂದ ಶೋಷಣೆ ಮಾಡುತ್ತ ಬರಲಾಗಿದೆ. ಮತ್ತೊಬ್ಬರ ಕುರಿತು ಕೆಟ್ಟ ಮಾತು ಆಡಬೇಡ 'ಮಾತು ಮನೆ ಕೆಡಿಸಿತು ತೂತು ಒಲೆ ಕೆಡಿಸಿತು' ಎನ್ನುವಂತೆ ಹೆಚ್ಚು ಚುಚ್ಚುವ ಮಾತಿನಿಂದ ಇಡೀ ಸಂಸಾರವೇ ಹಾಳಾಗತ್ತದೆ. ಹೀಗೆ ನೀತಿಯುತ ಮೌಲ್ಯದ ತುಣುಕುಗಳ ಆಕಾಶದಲ್ಲಿ ಚುಕ್ಕಿಗಳೆಸೆದಂತೆ ಜನಪದ ಹೆಣ್ಣಿನ ಮನದಂಗಳದಲ್ಲಿ ನೆಲೆಸಿವೆ. ಅವನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿದೆ.

**ಆಕರ ಗ್ರಂಥಗಳು**


- ಹಿಮ್ಮಡಿ. ವೈ.ಬಿ. (1995). ಜನಪದ ತ್ರಿಪದಿಗಳಲ್ಲಿ ಹೆಣ್ಣಿನ ಜೀವನ ಮೌಲ್ಯ. ಉಪನ್ಯಾಸ ಗ್ರಂಥಮಾಲೆ–438, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

- ಗಾಯತ್ರಿ ನಾವಡ. (1994). ಸ್ತ್ರೀವಾದದ ಸಾಂಸ್ಕೃತಿಕ ನೆಲೆಗಳು. **ಇದರಲ್ಲಿ** ಮಹೇಶ್ವರಯ್ಯ ಹೆಚ್.ಎಂ. ಮತ್ತು ಮುರಿಗೆಪ್ಪ ಎ. (ಸಂ.). *ಜಾನಪದ ಹೊಸದೃಷ್ಟಿ*: ಸಾಹಿತ್ಯ ಪ್ರಕಾಶನ. ಧಾರವಾಡ.
- ಗುರುಮೂರ್ತಿ ಕೆ.ಜಿ. (1979). ಜನಪದ ಸಮಾಜ ಮತ್ತು ಸಂಸ್ಕೃತಿ. ಕನ್ನಡ ಅಧ್ಯಯನ ಪೀಠ. ಧಾರವಾಡ.


**ಪರಾಮರ್ಶನ ಗ್ರಂಥಗಳು**


- ಚೆನ್ನಣ್ಣ ವಾಲಿಕಾರ. (1993). *ಜಾನಪದ ಲೋಕ.* ದಲಿತ ಬಂಡಾಯ ವಿಚಾರ ಪ್ರಚಾರ ಸಮಿತಿ. ಗುಲಬರ್ಗಾ.
- ದೇವೇಂದ್ರ ಕುಮಾರ ಹಕಾರಿ. (1983). *ಜಾನಪದ ಮೂಲಭೂತ ತತ್ವಗಳು*. ಮೂರು ಸಾವಿರ ಮಠ, ಹುಬ್ಬಳ್ಳಿ.
- ದುರ್ಗಾ ಭಾಗವತ. (1974). *ಭಾರತೀಯ ಜಾನಪದ ಸಮೀಕ್ಷೆ* (ಅನು, ಮರುಳಸಿದ್ದಪ್ಪ ಕೆ.) ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.
- ನಾಯಕ ಹಾ.ಮಾ. (1993). *ಜಾನಪದ ಸ್ವರೂಪ.* ತ.ವೆಂ. ಸ್ಮಾರಕ ಗ್ರಂಥ ಮಾಲೆ, ಮೈಸೂರು.
- ನಾಯಕ ಎನ್.ಆರ್. (1985) ಜಾನಪದ ಸಿಂಹಾವಲೋಕನ. ಜಾನಪದ ಪ್ರಕಾಶನ. ಹೊನ್ನಾವರ.